## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಟಿ.ಪ್ರಭಾಕರ್, ಹಿಂದಿನ ಸಹಾಯಕ-I, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ವಿರುದ್ಧ ಶಿಸ್ತು ಕ್ರಮ –ಅಂತಿಮ ಆದೇಶ

ಓದಲಾಗಿದೆ:- 1. ಕಾರಣ ಕೇಳುವ ನೋಟಿಸ್ ದಿನಾಂಕ:29.09.2018
2.ಶ್ರೀ.ಟಿ.ಪ್ರಭಾಕರ್ ರವರು ಸಲ್ಲಿಸಿರುವ ಲಿಖಿತ ಹೇಳಿಕೆ ದಿನಾಂಕ:22.12.2018

*****

ಪ್ರಸ್ತಾವನೆ:

ಶ್ರೀ ಟಿ.ಪ್ರಭಾಕರ್, ಹಿರಿಯ ಸಹಾಯಕರು ಈ ಹಿಂದೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ(ಸೇವೆಗಳು-ಎ) ಶಾಖೆಯಲ್ಲಿ ಸಹಾಯಕ-1 ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಇಲಾಖಾ ವಿಚಾರಣೆಯಂತಹ ಮಹತ್ವದ ಕೆಲವು ಕಡತಗಳನ್ನು ಸಕಾಲದಲ್ಲಿ ಸಲ್ಲಿಸದೇ ವಿಳಂಬಿಸಿರುವುದು ಶಾಖಾಧಿಕಾರಿಗಳು ಮೇ, 2018ರಲ್ಲಿ ಮೇಜು ತಪಾಸಣೆ ನಡೆಸಿದ ಸಂದರ್ಭದಲ್ಲಿ ಕಂಡುಬಂದಿರುತ್ತದೆ. ಹಾಗಾಗಿ ಸದರಿಯವರು ಸಚಿವಾಲಯ ಕೈಪಿಡಿಯ ಅನುಸಾರ ಕರ್ತವ್ಯ ನಿರ್ವಹಿಸದೇ ಕರ್ತವ್ಯಲೋಪವೆಸಗಿರುವುದರಿಂದ ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮಗಳ ನಿಯಮ3(1)ವನ್ನು ಉಲ್ಲಂಘಿಸಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿದ ಕಾರಣ ಸದರಿಯವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ನಿರ್ಧರಿಸಲಾಗಿರುತ್ತದೆ.

ಶ್ರೀ ಟಿ.ಪ್ರಭಾಕರ್, ಹಿರಿಯ ಸಹಾಯಕ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಗಳ 1957ರ ನಿಯಮ 11 ರಂತೆ ದೋಷಾರೋಪಣೆ ಪಟ್ಟಿಯನ್ನು ದಿನಾಂಕ:29.09.2018ರ ಕಾರಣ ಕೇಳುವ ನೋಟಿಸ್‌ನೊಂದಿಗೆ ಜಾರಿ ಮಾಡಿರುತ್ತದೆ. ಪ್ರತಿಯಾಗಿ ಶ್ರೀ ಟಿ.ಪ್ರಭಾಕರ್, ಹಿರಿಯ ಸಹಾಯಕರು, ಕಂದಾಯ ಇಲಾಖೆ(ಭೂ ಸ್ವಾಧೀನ) ರವರು ಮೇಲೆ ಓದಲಾದ (2)ರ ದಿನಾಂಕ:22.12.2018ರಂದು ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ಶ್ರೀ ಟಿ.ಪ್ರಭಾಕರ, ಹಿರಿಯ ಸಹಾಯಕರು, ಇವರ ವಿರುದ್ಧದ ಆರೋಪವೆಂದರೆ ಈ ಹಿಂದೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸೇವೆಗಳು-ಎ ಶಾಖೆಯ ಸಹಾಯಕ-1 ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಸ್ವೀಕರಿಸಿದ ಸ್ವೀಕೃತಿಗಳನ್ನು ಸಚಿವಾಲಯ ಕೈಪಿಡಿಯ ಅನುಸಾರ ಮಂಡಿಸದೆ ವಿಳಂಬಿಸಿರುವುದು ಹಾಗೂ ವಿಷಯ ನಿರ್ವಾಹಕರಾಗಿ ಇಲಾಖಾ ವಿಚಾರಣೆಯಂತಹ ಮಹತ್ವದ ಕಡತಗಳನ್ನು ಸಕಾಲದಲ್ಲಿ ಸಲ್ಲಿಸದೇ ತೀವ್ರ ಕರ್ತವ್ಯಲೋಪವೆಸಗಿರುತ್ತಾರೆ.

ಆಪಾದಿತರಾದ ಶ್ರೀ ಟಿ.ಪ್ರಭಾಕರ್, ರವರು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ, ಲೋಕಾಯುಕ್ತ ಕಚೇರಿಯ ವಿಚಾರಣಾ ವರದಿ ಹಾಗೂ ಇತರೆ ದಾಖಲೆಗಳನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ ಪ್ರಕರಣದಲ್ಲಿ ಭಾಗಿಯಾಗಿದ್ದ ಆಪಾದಿತ ಅಧಿಕಾರಿ/ನೌಕರರಿಗೆ ದಂಡನೆ ವಿಧಿಸುವ ಪೂರ್ವದಲ್ಲಿ 2ನೇ ಕಾರಣ ಕೇಳುವ ನೋಟಿಸ್‌ಗೆ ಪ್ರತಿಯಾಗಿ ಆಪಾದಿತರುಗಳು ಲಿಖಿತ ಹೇಳಿಕೆ ಸಲ್ಲಿಸಿದ್ದು, ಅದರನುಸಾರ ಕಡತಗಳನ್ನು ಪರಿಶೀಲಿಸಿ ಮಂಡಿಸುವಲ್ಲಿ ದುರುದ್ದೇಶಪೂರ್ವಕವಾಗಿ ವಿಳಂಬವಾಗಿರದೇ ಕಾರ್ಯ ಒತ್ತಡದಿಂದಾಗಿ ವಿಳಂಬಾಗಿರುತ್ತದೆಂದು, ದಿನಾಂಕ:03.06.2017 ರಿಂದ ಹಿರಿಯ ಸಹಾಯಕ ಹುದ್ದೆಯ ಪ್ರಭಾರದ ಜೊತೆ ಸಹಾಯಕ ಹುದ್ದೆಯ ಕರ್ತವ್ಯ ನಿರ್ವಹಣೆ ಕಾರ್ಯ ಒತ್ತಡದಿಂದ ಇಲಾಖಾ ವಿಚಾರಣೆ ಕಡತಗಳನ್ನು ಮಂಡಿಸುವಲ್ಲಿ ವಿಳಂಬವಾಗಿರುತ್ತದೆಂದು, ಹಿರಿಯ ಸಹಾಯಕ ಹುದ್ದೆಗೆ

ಮುಂಬಡ್ತಿ ಹೊಂದಿದ ಸಂದರ್ಭದಲ್ಲಿ ಸಹಾಯಕ ಹುದ್ದೆಗೆ ಯಾವುದೇ ವಿಷಯ ನಿರ್ವಾಹಕರು ಹೊಸದಾಗಿ ನೇಮಕ ಹೊಂದಿಲ್ಲದ ಕಾರಣ ಹಿರಿಯ ಸಹಾಯಕ ಹುದ್ದೆಯ ಜೊತೆಗೆ ಸಹಾಯಕ ಹುದ್ದೆಯ ಕೆಲಸವನ್ನು ನಿರ್ವಹಿಸಿರುವುದರಿಂದ ಎರಡು ಹುದ್ದೆಯ ಕಾರ್ಯಭಾರ ಜಾಸ್ತಿಯಾಗಿರುತ್ತದೆಂದು, ಆರೋಪ ಪಟ್ಟಿಯಲ್ಲಿ ತಿಳಿಸಿರುವ 8 ಪ್ರಕರಣಗಳ ಪೈಕಿ 7 ಪ್ರಕರಣಗಳಲ್ಲಿ ಆದೇಶ ಹೊರಡಿಸಿದ್ದು. ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲವೆಂದು ತಿಳಿಸಿ, ತಮ್ಮ ವಿರುದ್ಧದ ಉದ್ದೇಶಿತ ಶಿಸ್ತು ಕ್ರಮ ಕೈಬಿಡುವಂತೆ ಕೋರಿರುತ್ತಾರೆ.

ಶ್ರೀ ಟಿ.ಪ್ರಭಾಕರ್, ಹಿರಿಯ ಸಹಾಯಕರು ಈ ಹಿಂದೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ(ಸೇವೆಗಳು-ಎ) ಶಾಖೆಯಲ್ಲಿ ಸಹಾಯಕ-1 ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ತಮ್ಮ ವ್ಯಾಪ್ತಿಗೆ ಸಂಬಂಧಿಸಿದ ಸ್ವೀಕೃತಿಗಳನ್ನು ಹಾಗೂ ಇಲಾಖಾ ವಿಚಾರಣೆಯಂತಹ ಮಹತ್ವದ ಕಡತಗಳನ್ನು ಮೇಲಾಧಿಕಾರಿಗಳಿಗೆ ಸಕಾಲದಲ್ಲಿ ಸಲ್ಲಿಸದೇ ಕರ್ತವ್ಯಲೋಪವೆಸಗಿರುವುದು ಶಾಖಾಧಿಕಾರಿಗಳು ಮೇ 2018 ರಂದು ಮೇಜು ತಪಾಸಣೆ ನಡೆಸಿದ ಸಂದರ್ಭದಲ್ಲಿ ರುಜುವಾತಾಗಿರುತ್ತದೆ. ಹಾಗಾಗಿ ಸದರಿಯವರು ಸಲ್ಲಿಸಿರುವ ಹೇಳಿಕೆಗಳನ್ನು ಒಪ್ಪಲು ಸಕಾರಣಗಳು ಇಲ್ಲದಿರುವುದರಿಂದ ಕರ್ತವ್ಯಲೋಪವೆಸಗಿರುವುದು ಸ್ಪಷ್ಟವಾಗಿ ಸಾಬೀತಾಗಿರುತ್ತದೆ. ಹಾಗಾಗಿ ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ದಂಡನೆ ವಿಧಿಸಲು ಸರ್ಕಾರವು ನಿರ್ಧರಿಸಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ:

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 340 ಜಿಪಅ2018 ಬೆಂಗಳೂರು ದಿನಾಂಕ: 11.02.2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಟಿ.ಪ್ರಭಾಕರ್, ಅಂದಿನ ಸಹಾಯಕ-1, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ಹಾಲಿ ಹಿರಿಯ ಸಹಾಯಕ, ಕಂದಾಯ ಇಲಾಖೆ(ಭೂ ಸ್ವಾಧೀನ) ರವರು ಎಸಗಿರುವ ಕರ್ತವ್ಯಲೋಪಕ್ಕೆ ಸಂವಾದಿಯಾಗಿ ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು-1957ರ ನಿಯಮ-8 (iii) ರನ್ವಯ ಅವರ ಕಾಲಿಕ ವೇತನ ಶ್ರೇಣಿಯಲ್ಲಿ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಹೊಂದದಂತೆ ತಡೆಹಿಡಿಯುವ ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

11/02/2019

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇ-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ,

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಬೆಂಗಳೂರು
2. ಸರ್ಕಾರದ ಉಪ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
3. ಸರ್ಕಾರದ ಅಧೀನ ಕಾರ್ಯದರ್ಶಿ, ಸಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ( ಆಡಳಿತ-ಎ)
4. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಲೆಕ್ಕ ಪತ್ರ ಶಾಖೆ)
5. ಶ್ರೀ ಟಿ.ಪ್ರಭಾಕರ್, ಹಿರಿಯ ಸಹಾಯಕ, ಕಂದಾಯ ಇಲಾಖೆ(ಭೂ ಸ್ವಾಧೀನ) ಬಹುಮಹಡಿಗಳ ಕಟ್ಟಡ, ಬೆಂಗಳೂರು

ಮಾಹಿತಿಗಾಗಿ,

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ
2. ಸರ್ಕಾರದ ಉಪಕಾರ್ಯದರ್ಶಿ(ಆಡಳಿತ-1), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
3. ಶಾಖಾ ರಕ್ಷಾ ಕಡತ